ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ತುಮಕೂರು (ಪ್ರಾದೇಶಿಕ) ವಿಭಾಗ,
ರಾಮಕೃಷ್ಣನಗರ, ಕುಣಿಗಲ್ ರಸ್ತೆ,
ತುಮಕೂರು- 572105.

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

ಕಛೇರಿ : 0816 – 2201196
ಫ್ಯಾಕ್ಸ್ : 0816 - 2201197

ಸಂಖ್ಯೆ-ಎ8/ಎಲ್.ಎನ್.ಡಿ/ಎನ್.ಒ.ಸಿ/ಸೋ.ಪಾ/2015-2016

ದಿನಾಂಕ: 14-12-2015

Karnataka Solar Power Development Corporation Limited Bangalore
SR: 25
Date: 21/12/15

ಇವರಿಗೆ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಕೆ.ಎಸ್.ಪಿ.ಡಿ.ಸಿ.ಎಲ್
#39, "ಶಾಂತಿ ಗೃಹ"
ಪ್ಯಾಲೇಸ್ ರಸ್ತೆ, ಬೆಂಗಳೂರು

ಮಾನ್ಯರೇ,

ವಿಷಯ: Issue of NOC for Development of Solar park at Nagalamadike Hobli, Pavagada Taluk, Tumakuru Dist-Reg.

ಉಲ್ಲೇಖ:1 ನಿಮ್ಮ ಕಛೇರಿ ಪತ್ರ ಸಂಖ್ಯೆ:ಕೆ.ಆರ್.ಇ.ಡಿ.ಎಲ್/07/ಎಸ್.ಪಿ/ಎಫ್-02/2015/50 ದಿನಾಂಕ: 17-11-2015

2 ವಲಯ ಅರಣ್ಯಾಧಿಕಾರಿ, ಪಾವಗಡ ವಲಯ, ಪಾವಗಡ ಇವರ ಕಛೇರಿ ಪತ್ರ ಸಂಖ್ಯೆ:ವಲಅ:ಪಾವ:ಎನ್ಒಸಿ:ವಿವ:/2015-2016 ದಿ:25-11-2015

3 ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಮಧುಗಿರಿ ಉಪ ವಿಭಾಗ ಮಧುಗಿರಿ ಇವರ ಕಛೇರಿ ಪತ್ರ ಸಂಖ್ಯೆ:ಸಅಸಂ:ಮಉವಿ: ವಪ್ರಾಪ:ವಿವ:05:2015-2016

4 ಈ ಕಛೇರಿ ಪತ್ರದ ಸಮಸಂಖ್ಯೆ ದಿನಾಂಕ:18-11-2015

GM for further n/a
22/12/2K15

*****

ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸೋಲಾರ್ ಪವರ್ ಡೆವೆಲಫ್‌ಮೆಂಟ್ ಕಾರ್ಪೋರೇಷನ್ ಲಿ. ವತಿಯಿಂದ ಏಷ್ಯಾ ಖಂಡದಲ್ಲೇ ಅತಿ ದೊಡ್ಡ 2000 MW "ಸೋಲಾರ್ ಪಾರ್ಕ್" ನಿರ್ಮಾಣ ಮಾಡಲು ಪಾವಗಡ ತಾಲ್ಲೂಕಿನ 5 ಗ್ರಾಮಗಳಾದ ವಲ್ಲೂರು, ತಿರುಮಣಿ, ಬಾಲಸಮುದ್ರ, ಕ್ಯಾತಗನಚರ್ಲು ಮತ್ತು ರಾಯಚರ್ಲು ಗ್ರಾಮಗಳ ವ್ಯಾಪ್ತಿಯನ್ನು " No Reserved" or " No semi reserved forest region" ಎಂದು ಆದಷ್ಟು ಶೀಘ್ರವಾಗಿ ಎನ್.ಒ.ಸಿ ನೀಡಲು ಹಾಗೂ ಸದರಿ ಪ್ರದೇಶದಲ್ಲಿನ ಸಸ್ಯವರ್ಗ ಮತ್ತು ಪ್ರಾಣಿ ವರ್ಗದ ಮಾಹಿತಿಯನ್ನು ನೀಡುವಂತೆ ಉಲ್ಲೇಖ (1)ರ ಪತ್ರದಲ್ಲಿ ಕೋರಿರುವುದು ಸರಿಯಷ್ಟೆ.

ಉಲ್ಲೇಖ (2)ರಲ್ಲಿ ವಲಯ ಅರಣ್ಯಾಧಿಕಾರಿ, ಪಾವಗಡ ವಲಯ, ಪಾವಗಡ ಇವರ ಸ್ಥಳ ಪರಿಶೀಲನಾ ವರದಿಯಂತೆ ಪ್ರಸ್ತಾಪಿತ ಮೇಲೆ ತಿಳಿಸಿದ 5 ಗ್ರಾಮಗಳ ವ್ಯಾಪ್ತಿಯಲ್ಲಿನ ಜಮೀನುಗಳು "ಮೀಸಲು ಅರಣ್ಯ" ಅಥವಾ "ಅರೆ ಮೀಸಲು ಅರಣ್ಯ" ಪ್ರದೇಶಗಳಾಗಿರುವುದಿಲ್ಲ, ಹಾಗೂ ಸದರಿ ಪ್ರದೇಶದಲ್ಲಿ ಬಳ್ಳಾರಿ ಜಾಲಿ, ಕರಿಜಾಲಿ, ಈಚಲುಮರ, ಲಂಟಾಣಾ, ತಂಗಟೆ ಮುಂತಾದ ಸಸ್ಯ ವರ್ಗಗಳು ಹಾಗೂ ಸದರಿ ಪ್ರದೇಶದ ಸ್ಥಳೀಯರನ್ನು ವಿಚಾರಿಸಿದಾಗ ಕಾಡುಹಂದಿ. ಮೊಲ, ಮತ್ತು ವಿರಳವಾಗಿ ಕೃಷ್ಣಮೃಗ ಮುಂತಾದ ಪ್ರಾಣಿ ವರ್ಗ ಕಂಡುಬರುತ್ತದೆ. ಉಲ್ಲೇಖ (3)ರ ಪತ್ರದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಮಧುಗಿರಿ ಉಪ ವಿಭಾಗ ಮಧುಗಿರಿ ಇವರು ಉಲ್ಲೇಖ (2)ರ ವರದಿ ಹಾಗೂ ದಿ:20-11-2015 ರಂದು ಪ್ರಸ್ತಾಪಿತ ಪ್ರದೇಶವನ್ನು ಪರಿಶೀಲಿಸಿ, ಪ್ರಸ್ತಾಪಿತ ಪ್ರದೇಶವು "ಮೀಸಲು ಅರಣ್ಯ"/ಡೀಮ್ಡ್ ಫಾರೆಸ್ಟ್/ಇತರೆ ಯಾವುದೇ ಅರಣ್ಯ ಪ್ರದೇಶಕ್ಕೆ ಸಂಬಂಧಪಟ್ಟಿಲ್ಲದೇ ಎಕ್ಸ್‌ಪರ್ಟ್ ಕಮಿಟಿ ಪುಸ್ತಕದಲ್ಲಿಯೂ ಸಹ ಸೇರಿರುವುದಿಲ್ಲ ಹಾಗೂ ಪ್ರಸ್ತಾಪಿತ ಪ್ರದೇಶದಿಂದ 100ಮೀ. ವ್ಯಾಪ್ತಿಯಲ್ಲಿಯೂ ಯಾವುದೇ ಮೀಸಲು ಅರಣ್ಯ ಪ್ರದೇಶದ ಸರಹದ್ದು ಇರುವುದಿಲ್ಲ ಎಂದು ವರದಿಸಿದ್ದು ಅಂತೆಯೇ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ

(ಎಂ.ವಿ.ಅಮರನಾಥ್)
ಉಪ ಅರಣ್ಯ ಸಂರಕ್ಷಣಾಧಿಕಾರಿ
ತುಮಕೂರುವಿಭಾಗ ತುಮಕೂರು

AGM
For needful
22/12/15